ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ತುಮಕೂರು ಜಿಲ್ಲೆಯಲ್ಲಿ ತಾಳೆ ಗಿಡದ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಸರ್ಕಾರದಲ್ಲಿ ಯಾವ ಪ್ರಸ್ತಾವನೆ ಇರುವುದಿಲ್ಲ.

ಆ) ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ವಿಷಯ :– ಹನಿ ನೀರಾವರಿ ಯೋಜನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 443 (839)

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) :– ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹನಿ ನೀರಾವರಿ ಮತ್ತು ತುಂತುರ ನೀರಾವರಿ ವಿಧಾನಗಳು ಈಗಿನ ಆಧುನಿಕ ರೀತಿಯ ವೈಜ್ಞಾನಿಕ ಪದ್ಧತಿಗಳೆಂಬುದು ಸತ್ಯವೇ ? ಮತ್ತು ಇವುಗಳಿಂದ ಡೀಸಲ್ ವಿದ್ಯುಚ್ಛಕ್ತಿ ಮತ್ತು ನೀರಿನ ಬಳಕೆಗಳನ್ನು ಮಿತಗೊಳಿಸಬಹುದೆ ?

ಆ) ಹಾಗಿದ್ದಲ್ಲಿ ಸರ್ಕಾರವು ಹನಿ ಮತ್ತು ತುಂತುರ ನೀರಾವರಿ ಪದ್ಧತಿಯನ್ನು ಅಳವಡಿಸಲು ತೆಗೆದು ಕೊಂಡಿರುವ ಕ್ರಮವೇನು ?

ಇ) ಕೃಷಿ ಕ್ಷೇತ್ರದಲ್ಲಿ ಈ ಬಗ್ಗೆ ಸಹಾಯಧನ ಮತ್ತು ಪ್ರಚಾರ ಮಾಡುವ ಯೋಜನೆಗಳಿವೆಯೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :–

ಅ) ಹೌದು.

ಆ) 1986–87 ರಿಂದ ವಿವಿಧ ತೋಟಗಾರಿಕಾ ಬೆಳೆಗಳಿಗೆ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸುವ ಪ್ರಾಯೋಗಿಕ (ಪೈಲಟ್) ಯೋಜನೆಯನ್ನು ಇಲಾಖೆಯು ಅನುಷ್ಠಾನಗೊಳಿಸುತ್ತಿದ್ದು, ಈಗ ರಾಜ್ಯದ 55 ತಾಲ್ಲೂಕುಗಳಲ್ಲಿ ಯೋಜನೆ ಜಾರಿಯಲ್ಲಿದೆ. ಈಗ ರಾಜ್ಯ ಸರ್ಕಾರವು 40 ಲಕ್ಷ ರೂಪಾಯಿಗಳ ಪ್ರಾಸ್ಪಿಕಲ್ಚರ್ ಅಭಿವೃದ್ಧಿ ಯೋಜನೆಯನ್ನು ಇಲಾಖೆಯು ಅನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸುತ್ತಿದೆ. ಈ ಯೋಜನೆಯ ಪ್ರಕಾರ ರೈತರ ತೋಟಗಳಿಗೆ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಲು ಸಹಾಯಧನವನ್ನು ನೀಡುವುದಲ್ಲದೆ ಪಿ.ವಿ. ಸಿ. ಪೈಪುಗಳ ನೀರಾವರಿ ಕೊಳವೆಗಳನ್ನು ಅಳವಡಿಸುವ ಯೋಜನೆಯನ್ನು ಹಮ್ಮಿಕೊಂಡಿದೆ.

ಇ) ಕೃಷಿಕರಿಗೆ ಉತ್ತೇಜನ ನೀಡುವ ಸಲುವಾಗಿ ಹನಿ ನೀರಾವರಿ ಪೈಲಟ್ ಯೋಜನೆ ಹರಿಜನ, ಗಿರಿಜನ, ಮತ್ತು ಅತಿ ಸಣ್ಣ ರೈತರಿಗೆ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಲು ಶೇಕಡ 50 ರಷ್ಟು ಅಥವಾ ರೂ. 20.000 ಗರಿಷ್ಟ ಮಿತಿಯ ಸಹಾಯ ಧನ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಇತರೆ ರೈತರಿಗೆ ಈ ಸೌಲಭ್ಯವು ಶೇಕಡ 20 ರಷ್ಟು ಅಥವಾ ಗರಿಷ್ಟ ರೂ. 8.000 ಆಗಿದೆ.

ಪ್ರಾಸ್ಪಿಕಲ್ಚರ್ ಯೋಜನೆಯಲ್ಲಿ ಈ ಸಹಾಯಧನ ಸೌಲಭ್ಯವನ್ನು ಹರಿಜನ, ಗಿರಿಜನ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಗರಿಷ್ಟ 25 000 ರೂ. ಗಳ ವರೆಗೆ ಮತ್ತು ಇತರೆ ರೈತರಿಗೆ ಗರಿಷ್ಟ 12,000/ರೂ. ಗಳ ವರೆಗೆ ಹೆಚ್ಚಿಸಲು ಪರಿಶೀಲಿಸಲಾಗುತ್ತಿದೆ.

ವಿಷಯ :– ಕಳ್ಳಂಬೆಳ್ಳ ಕ್ಷೇತ್ರದ ತಾಲ್ಲೂಕುಗಳಲ್ಲಿ ನಿವೇಶನ ರಹಿತ ಫಲಾನುಭವಿಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 444 (840)

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಕಳ್ಳಂಬೆಳ್ಳ ಕ್ಷೇತ್ರದ ಮೂರು ತಾಲ್ಲೂಕುಗಳಲ್ಲಿ ನಿವೇಶನ ರಹಿತ ಫಲಾನುಭವಿಗಳೆಷ್ಟು ?

ಬಿ) ಈ ನಿವೇಶನರಹಿತ ಫಲಾನುಭವಿಗಳಿಗೆ ನಿವೇಶನ ನೀಡಲು ಸರ್ಕಾರ ಉದ್ದೇಶಿಸಿರುವ ಕ್ರಮ ?

ಸಿ) ಈ ಗ್ರಾಮಗಳಲ್ಲಿ ಭೂಸ್ವಾಧೀನ ಪಡಿಸಿಕೊಳ್ಳಲು ಸರ್ಕಾರ ತುರ್ತು ಕ್ರಮ ತೆಗೆದುಕೊಂಡಿದೆಯೋ ?

ಡಿ) ನಿವೇಶನ ನೀಡಲು ಸರ್ಕಾರ ಅನುಸರಿಸುತ್ತಿರುವ ನಿಯಮಗಳು ?

ಇ) ಈ ನಿಯಮಾವಳಿಗಳು ಸಣ್ಣ ಮತ್ತು ಅತಿಸಣ್ಣ ರೈತರುಗಳಿಗೆ ಅದರಲ್ಲೂ ಮಧ್ಯಮ ವರ್ಗದವರಿಗೆ ಅನುಕೂಲಕರವಾಗಿಲ್ಲವೆಂಬುದು ತಿಳಿದಿರುತ್ತದೆಯೇ ?

ಎಫ್) ಹಾಗಿದ್ದಲ್ಲಿ, ನಿವೇಶನರಹಿತರಿಗೆ ಮತ್ತು ಸಣ್ಣ ಮತ್ತು ಅತಿಸಣ್ಣ ರೈತರಿಗೆ ನಿವೇಶನ ನೀಡಲು ನಿಖರವಾದ ಉದ್ದೇಶಿಸಿರುವ ಕ್ರಮ ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೋಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :–

ಎ) ಕಳ್ಳಂಬೆಳ್ಳ ಕ್ಷೇತ್ರದ ಮೂರು ತಾಲ್ಲೂಕುಗಳಲ್ಲಿ –ಈ ಕೆಳಕಂಡ ನಿವೇಶನರಹಿತ ಫಲಾನುಭವಿಗಳು ಇರುತ್ತಾರೆ.

ಶಿರಾ ತಾಲ್ಲೂಕು — 1223

ಗುಬ್ಬಿ ತಾಲ್ಲೂಕು — 7154

ಚಿಕ್ಕನಾಯಕನಹಳ್ಳಿ ತಾಲ್ಲೂಕು — 2986

ಬಿ) ಈಗಾಗಲೇ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳಲ್ಲಿ ಮತ್ತು ಎಲ್ಲೆಲ್ಲಿ ಸರ್ಕಾರಿ ಜಮೀನು ಹಾಗೂ ಗ್ರಾಮಠಾಣ ಲಭ್ಯವಿದೆಯೋ ಅಲ್ಲಿ ನಿವೇಶನ ನೀಡಲು ಸರ್ಕಾರ ಉದ್ದೇಶಿಸಿದೆ.

ಸಿ) ಸರ್ಕಾರಿ ಹಾಗೂ ಗ್ರಾಮಠಾಣ ಜಮೀನು ಯಾವ ಯಾವ ಗ್ರಾಮಗಳಲ್ಲಿ ಸಾಕಷ್ಟು ಇಲ್ಲವೋ ಅಂತಹ ಗ್ರಾಮಗಳಲ್ಲಿ ಹೊಸದಾಗಿ ಭೂಸ್ವಾಧೀನದ ಕ್ರಮ ಜರುಗಿಸಲು ಕ್ರಮ ತೆಗೆದುಕೊಂಡಿರುತ್ತೆ.

ಡಿ) ವಾರ್ಷಿಕ ಪರಮಾನ 2.000 ರೂ. ಗಳಿಗಿಂತ ಕಡಿಮೆ ಇರುವ ನಿವೇಶನರಹಿತ ಹಾಗೂ ಜಮೀನು ಇಲ್ಲದ ಫಲಾನುಭವಿಗಳಿಗೆ ಮಾತ್ರ ಈ ನಿಯಮ ಅನುಗುಣವಾಗಿರುತ್ತದೆ.

ಇ) —ಇಲ್ಲ—

ಎಫ್) ಪರಮಾನ ಮಿತಿಯನ್ನು ಕೇಂದ್ರ ಸರ್ಕಾರ ಸಮಗ್ರ ಗ್ರಾಮೋಣಾಭಿವೃದ್ಧಿ ಯೋಜನೆಯಲ್ಲಿ ನಿಗದಿ ಪಡಿಸಿರುವ ಪರಮಾನಕ್ಕನುಗುಣ ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗುವುದು.

PAPERS TO BE LAID ON THE TABLE

I. Sri. S. Bangarappa (Chief Minister) ಇವರ ಪರವಾಗಿ ಶ್ರೀ ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು) :— **I beg to lay**

1. Annual Report of (1) Cauvery Basin Project, Mysore and (2) Tungabadra Project, Munirabad of Command Area Development Authority for the year 1989–90; as required under Section 25 of the Karnataka Command Area Development Act, 1980.

II. Sri. Azeez Sait (Minister for Transport and Wakfs):— I beg to lay

2. Notification No. FTD 105 TMT 88 dated 7th November, 1990. Exemption from payment of Tax payable in the State for the period of its stay in Karnataka provided the tax has been paid according to rules in the State of Tamilnadu; as required under sub-section (1) of Section 16 of Karnataka Motor Vehicles Taxation Act, 1957.

III. Sri. B. Basavalingappa (Minister for Rural Development and Panchayat Raj and Animal Husbandry) : I beg to lay

3. 9th Annual Report of Karnataka Cashew Development Corporation Limited for the year 1986–87.